ಆರೋಗ್ಯ ಕೇಂದ್ರವನ್ನು ಸ್ಥಾಪಿಸಂವ ಬಗ್ಗೆ

೯೭೬. ಶ್ರೀ ಎಂ. ರೇವಣಸಿದ್ದಯ್ಯ (ಸಿರಗುಪ್ಪ).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆ ಶಿರಗುಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆ ಆಸ್ಪತ್ರೆಯಾಗಿ ಮಾಡಲಾಗಿದೆಯೇ ? ಎಷ್ಟು ಹಾಸಿಗೆಗಳನ್ನು ಒದಗಿಸಲಾಗಿದೆ ?

ಆ) ಆಸ್ಪತ್ರೆ ಕಟ್ಟಡಕ್ಕೆ ಹಣ ಮಂಜೂರು ಮಾಡಲಾಗಿದೆಯೇ ?

ಇ) ಶಿರಗುಪ್ಪ ತಾಲ್ಲೂಕಿನ ಶಿರಿಗೇರಿ ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಆಗಿ ಮೇಲ್ದರ್ಜೆಗೆ ವರ್ಗಾಯಿಸಲಾಗಿದೆಯಾ? ಹಾಗಿದ್ದಲ್ಲಿ ಎಂದಿನಿಂದ ವರ್ಗಾಯಿಸಲಾಯಿತು?

ಈ) ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಕ್ಕೆ ಹಣ ಮಂಜೂರಾಗಿದೆಯಾ ?

ಉ) ಶಿರಗುಪ್ಪ ತಾಲ್ಲೂಕಿನ ಕರೂರು ಗ್ರಾಮಕ್ಕೆ ಹೆರಿಗೆ ಆಸ್ಪತ್ರೆ ಮಂಜೂರಾಗಿದೆಯೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು).—

ಅ) ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ೧೯೮೬-೮೭ನೇ ಸಾಲಿನಲ್ಲಿ ಶಿರಿಗೇರಿ ಗ್ರಾಮದಲ್ಲಿದ್ದ ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡಲಾಗಿದೆ.

ಈ) ಇಲ್ಲ.

ಉ) ೧೦ ಹಾಸಿಗೆಗಳ ಒಂದು ಪ್ರಸೂತಿ ಗೃಹವನ್ನು ಮಂಜೂರು ಮಾಡಲಾಗಿದೆ.

ಲೋಕಾಯುಕ್ತದ ಅಧಿಕಾರಿಗಳ ಜಾಲಕ್ಕೆ ಸಿಲುಕಿದ ಅಧಿಕಾರಿಗಳ ಬಗ್ಗೆ

೧೨೫೦. ಶ್ರೀ ಬಿ. ಎ. ಉಪ್ಪಿನ (ಕುಂದಗೋಳ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧-೪-೮೬ರಿಂದ ಇಲ್ಲಿಯವರೆಗೆ ಲೋಕಾಯುಕ್ತದ ಅಧಿಕಾರಿಗಳ ಜಾಲಕ್ಕೆ ಸಿಲುಕಿದ ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಅದರಲ್ಲಿ ಪೋಲೀಸ್ ಇಲಾಖೆಯ ಅಧಿಕಾರಿಗಳ ಸಂಖ್ಯೆ ಎಷ್ಟು ?

ಇ) ಆಪಾದಿತರ ಮೇಲೆ ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೪ (೧-೪-೮೬ರಿಂದ ೩೧-೧೨-೮೭ರ ವರೆಗೆ)

ಆ) ೩

ಇ) ಮೂರು ಆಪಾದಿತರ ಮೇಲೆ ಭ್ರಷ್ಟಾಚಾರ ನಿರೋಧ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ಪ್ರಕಾರ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಅವರಲ್ಲಿ ಒಬ್ಬ ಅಧಿಕಾರಿಗಳ ಮೇಲೆ ನ್ಯಾಯಾಲಯದಲ್ಲಿ ಈಗಾಗಲೇ ಶಿಕ್ಷೆ ಹಾಕಲಾಗಿದೆ, ೬ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಶಿಫಾರಸ್ಸು ಮಾತ್ರ ಮಾಡಿದೆ ಮತ್ತು ಇನ್ನುಳಿದ ೩೨ ಅಧಿಕಾರಿಗಳ ತನಿಖೆ ನಡೆಸಿ ಮಾಹಿತಿ ಸಂಗ್ರಹಿಸಲಾಗುತ್ತಿದೆ.